(31)

## ಕರ್ನಾಟಕ ವಿಧಾನ ಪರಿಷತ್ತು

### ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ. ಎ. ಶರವಣ ಇವರು ನಿಯಮ 330ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

**ವಿಷಯ:**

ಕೇಂದ್ರ ಸರ್ಕಾರದ ಮಾನ್ಯ ವಸತಿ ಮತ್ತು ನಗರ ವ್ಯವಹಾರಗಳ ಸಚಿವರು ತಿಳಿಸಿರುವಂತೆ ಕರ್ನಾಟಕ ರಾಜ್ಯಕ್ಕೆ ಅಮೃತ್-2.0 ಯೋಜನೆಯಡಿಯಲ್ಲಿ 628 ಕಾಮಗಾರಿಗಳಿಗೆ ಮಂಜೂರಾತಿ ನೀಡಿ ಒಟ್ಟು ರೂ.10274.13 ಕೋಟಿಗಳ ಅನುದಾನವನ್ನು ಒದಗಿಸಲಾಗಿದ್ದು, ಈ ಅನುದಾನಕ್ಕೆ ಅನುಗುಣವಾಗಿ ಇಲ್ಲಿಯವರೆಗೆ ರೂ.2212.54 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ ಎಂದು ಮಾಹಿತಿ ನೀಡಿರುತ್ತಾರೆ. ಮಾನ್ಯ ಕೇಂದ್ರ ಸಚಿವರು ನೀಡಿರುವ ಮಾಹಿತಿಯಂತೆ ಈ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಪಾಲು ಎಷ್ಟು ಹಾಗೂ ರಾಜ್ಯ ಸರ್ಕಾರದ ಪಾಲು ಎಷ್ಟು ಹಾಗೂ 628 ಕಾಮಗಾರಿಗಳನ್ನು ಯಾವ ಯಾವ ಸಂಸ್ಥೆಗಳಿಗೆ ಟೆಂಡರ್ ಮೂಲಕ ವಹಿಸಲಾಗಿದೆ, ಕಾಮಗಾರಿಗಳ ಹೆಸರು, ಅಂದಾಜು ಮೊತ್ತ ಹಾಗೂ ನಿರ್ವಹಿಸಲಾಗುತ್ತಿರುವ ನಿರ್ಮಾಣ ಸಂಸ್ಥೆಗಳ ಗುತ್ತಿಗೆದಾರರಿಗೆ ನೀಡಿರುವ ಕಾರ್ಯಾದೇಶಗಳ ಪ್ರತಿಗಳೊಂದಿಗೆ ಹಾಗೂ ಕೇಂದ್ರ ಸರ್ಕಾರದ ಅಮೃತ್-2.0 ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸುವಾಗ ಮತ್ತು Operational Guidelines of AMRUT 2.0 Scheme issued by MoHUA, Govt of India ಮಾರ್ಗಸೂಚಿಗಳ ಆದೇಶದ ಪ್ರತಿ ನೀಡುವುದು ಹಾಗೂ ಅದರ ಅನುಗುಣವಾಗಿ ದಿನಾಂಕ:20.05.2023 ರಿಂದ ಇಲ್ಲಿಯವರೆಗೆ ರಾಜ್ಯ ಸರ್ಕಾರವು ನಡೆಸಿರುವ Proceedings of the meeting of the State Level High Powered Steering Committee (SHPSC) under AMRUT 2.0 ಎಲ್ಲಾ ಸಭೆಗಳ ಸಭಾ ನಡವಳಿಗಳ ಸಂಪೂರ್ಣ ವಿವರಗಳೊಂದಿಗೆ ಮಾಹಿತಿ ಒದಗಿಸುವಂತೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆದಿರುವ ಬಗ್ಗೆ.

**ಉತ್ತರ:**

ಅಮೃತ್-2.0 ಯೋಜನೆಯ ಕಾಮಗಾರಿಗಳಿಗೆ ಅನುದಾನ ಹಂಚಿಕೆಯ ವಿವರ ಈ ಕೆಳಕಂಡಂತಿದೆ;

| ನಗರ ಸ್ಥಳೀಯ ಸಂಸ್ಥೆಯ ವರ್ಗ | ಯೋಜನಾ ವೆಚ್ಚಕ್ಕೆ ಕೇಂದ್ರದ ಪಾಲು | ಯೋಜನಾ ವೆಚ್ಚಕ್ಕೆ ರಾಜ್ಯದ ಪಾಲು | ಯೋಜನಾ ವೆಚ್ಚಕ್ಕೆ ನಗರ ಸ್ಥಳೀಯ ಸಂಸ್ಥೆ ಪಾಲು |
|---|---|---|---|
| ಒಂದು ಲಕ್ಷಕ್ಕಿಂದ ಕಡಿಮೆ ಜನ ಸಂಖ್ಯೆ ಇರುವ ನಗರ ಸ್ಥಳೀಯ ಸಂಸ್ಥೆಗಳು | 50% | 40% | 10% |
| ಒಂದು ಲಕ್ಷಕ್ಕಿಂದ ಹೆಚ್ಚಿನ ಜನ ಸಂಖ್ಯೆ ಇರುವ ನಗರ ಸ್ಥಳೀಯ ಸಂಸ್ಥೆಗಳು | 33.33% | 40% | 26.67% |

ಟೆಂಡರ್ ನೀಡಲಾಗಿರುವ ಕಾಮಗಾರಿಗಳ ಮೊತ್ತ ಹಾಗೂ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿರುವ ಸಂಸ್ಥೆಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ. ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಗುತ್ತಿಗೆದಾರರಿಗೆ ನೀಡಿರುವ ಕಾರ್ಯಾದೇಶಗಳ ಪ್ರತಿ, Operational Guidelines of AMRUT-2.0 ಹಾಗೂ ದಿನಾಂಕ:20.05.2023 ರಿಂದ ಇಲ್ಲಿಯವರೆಗಿನ State High Powered Steering Committee (SHPSC) ಸಭೆಯ ನಡವಳಿಗಳ ಪ್ರತಿಗಳನ್ನು ಪೆನ್ ಡ್ರೈವ್ ನಲ್ಲಿ ನೀಡಿದೆ.

ಸಂಖ್ಯೆ: ನಅಇ 224 ಸಿಎಸ್‌ಎಸ್ 2025

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು